ಈ) ಕಡಿಮೆ ವಿದ್ಯುತ್ ಮಗ್ಗಗಳನ್ನು ಹೊಂದಿರುವ ನೇಕಾರರು ಬಳಸಲಿರುವ ವಿದ್ಯುಚ್ಛಕ್ತಿ ವೆಚ್ಚದ ಹೊರೆಯನ್ನು ಕಡಿತಗೊಳಿಸಲು ಉದ್ದೇಶಿಸಿದ್ದು, ದೊಡ್ಡ ಘಟಕಗಳನ್ನು ವಿಭಜಿಸುವ ಉದ್ದೇಶ ಹೊಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

2693 (2969) ಶ್ರೀ ಎಂ.ವೈ. ಪಾಟೀಲ್ (ಅಫ್ಜಲ್‌ಪುರ್) :- ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ವರ್ಷ ಕರ್ನಾಟಕ ಕೈಮಗ್ಗ ನಿಗಮಕ್ಕೆ ವಿದ್ಯಾವಿಕಾಸ್ ಯೋಜನೆಯಡಿ ಶಾಲಾ ಮಕ್ಕಳಿಗೆ ಸಮವಸ್ತ್ರ ಪೂರೈಸುವುದಕ್ಕೆ ಸರ್ಕಾರ ಆದೇಶ ನೀಡುತ್ತಿದೆಯೇ;

ಆ) ಆದೇಶ ನೀಡುವವರೆಗೂ ರಾಜ್ಯದ ನೇಕಾರರಿಗೆ ಉದ್ಯೋಗವಿಲ್ಲದೆ ತೊಂದರೆ ಆಗುತ್ತಿರುವುದು ನಿಜವೇ;

ಇ) ಬಡ ನೇಕಾರರ ಉದ್ಯೋಗ ಭರವಸೆ ನೀಗುವಂತೆ 3 ವರ್ಷಗಳ ಕಾಲ ವಿದ್ಯಾ ವಿಕಾಸ ಯೋಜನೆಯಡಿ ಸಮವಸ್ತ್ರ ಪೂರೈಕೆಗೆ ಆದೇಶ ನೀಡುವ ಬಗ್ಗೆ ಸರ್ಕಾರ ಉದ್ದೇಶ ಹೊಂದಿದೆಯೇ;

ಶ್ರೀ ಹೆಚ್.ಸಿ. ಮಹದೇವಪ್ಪ (ಜವಳಿ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಶಿಕ್ಷಣ ಇಲಾಖೆಯನ್ನು ಕೋರಲಾಗಿದ್ದು ಅವರ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

2694 (1977) ಶ್ರೀ ಪಾಟೀಲ್ ಎಸ್.ಎಸ್ (ಮುಂಡರಗಿ) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ಮತಕ್ಷೇತ್ರದಲ್ಲಿ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವುದು ನಿಜವೇ; (ವಿವರ ನೀಡುವುದು);

ಆ) ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗುವುದೇ;

ಇ) ಮುಂಡರಗಿ ಪಶು ಆಸ್ಪತ್ರೆಯು ಕಟ್ಟಡ ಆರ್ಧಕ್ಕೆ ನಿಂತಿರುವುದನ್ನು ಪೂರ್ಣಗೊಳಿಸಲಾಗುವುದೇ?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಪಶುಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಪ್ರಸ್ತುತ ಇರುವುದಿಲ್ಲ. ಆದರೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇರುತ್ತದೆ. ಕಳೆದ ಮೂರು ವರ್ಷಗಳಲ್ಲಿ 600 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಸದ್ಯದಲ್ಲಿಯೆ 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

ಆ) ಯಾವುದೇ ಹೊಸ ಪಶುವೈದ್ಯ ಸಂಸ್ಥೆಯನ್ನು ಪ್ರಸ್ತುತ ಮಂಜೂರು ಮಾಡುವ ಕಾರ್ಯಕ್ರಮ ಇರುವುದಿಲ್ಲ. ಆದಾಗ್ಯೂ ಡಾ॥ ಡಿ.ಎಂ. ನಂಜುಡಪ್ಪನವರ ಸಮಿತಿಯ ಪ್ರಾದೇಶಿಕ ಅಸಮತೋಲನ ವರದಿಯಲ್ಲಿನ ಸಲಹೆಯಂತೆ ಬಹಳ ಹಿಂದುಳಿದ 39 ತಾಲ್ಲೂಕುಗಳಲ್ಲಿ ಕೊರತೆ ಇರುವ ಕಡೆ ತೆರೆಯಲು ಪರಿಶೀಲಿಸಲಾಗುವುದು.

ಇ) 2004–05ನೇ ಸಾಲಿನಲ್ಲಿ ಎಸ್.ಜಿ.ಎಸ್.ವೈ ಯೋಜನೆಯಡಿಯಲ್ಲಿ ರೂ. 4.00 ಲಕ್ಷಗಳನ್ನು ಕಟ್ಟಡ ಕಾಮಗಾರಿಗೆ ಒದಗಿಸಿದ್ದು ಕಾಮಗಾರಿ ಕಾರ್ಯ ಪ್ರಗತಿಯಲ್ಲಿದೆ.

2695 (1978) ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಮುಳಗುಂಡ ಪಟ್ಟಣದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕಟ್ಟಡವಿದೆಯೇ;

ಆ) ಕಟ್ಟಡವಿಲ್ಲದಿದ್ದರೆ ಕಟ್ಟಡ ಕಟ್ಟಲು ಏನು ಕ್ರಮ ಕೈಗೊಂಡಿದ್ದೀರಿ ಹಾಗೂ ಕಟ್ಟಡ ಯಾವಾಗ ಒದಗಿಸುತ್ತೀರಾ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸ್ವಂತ ಕಟ್ಟಡವಿರುವುದಿಲ್ಲ. ಬಾಡಿಗೆ ಕಟ್ಟಡದಲ್ಲಿ ಶಾಲೆ ನಡೆಯುತ್ತಿದೆ.

ಆ) ಮಂಜೂರಾದ ನಿವೇಶನವು ಕೆರೆ ಅಂಗಳವಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಸೂಕ್ತವಲ್ಲದ ಕಾರಣ, ಬದಲೀ ಜಮೀನು ಗುರುತಿಸಿ, ಜಿಲ್ಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಗದಗ್‌ರವರಿಗೆ ಸೂಚನೆ ನೀಡಿದೆ. ಸೂಕ್ತ ನಿವೇಶನವು ದೊರೆತ ನಂತರ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು.